ಸಾಕ್ಷಿಯನ್ನು ದಿನಾಂಕಃ 12-06-2023 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ಃ ಶ್ರೀ.ಕೆ.ವಿ.ಕೆ., ಪ್ರತಿವಾದಿ ರ ಪರ ವಕೀಲರಿಂದಃ**

ನಾನು ಇಂಜಿನಿಯರಿಂಗ ಪದವಿಯನ್ನು ವ್ಯಾಸಾಂಗ ಮಾಡಿರುತ್ತೇನೆ. ನಾನು ನನ್ನ ಪರವಾಗಿ ಮತ್ತು ವಾದಿ ನಂ.2 ರಿಂದ 4 ರ ಪರಿವಾಗಿ ಸಾಕ್ಷಿಯನ್ನು ನುಡಿತ್ತಿದ್ದೇನೆ. ವಾದಿ ನಂ.4 ನನ್ನ ತಾಯಿ ಆರೋಗ್ಯವಾಗಿದ್ದಾರೆಂದರೆ ಸರಿ. ಅವರು ನ್ಯಾಯಾಲಯಕ್ಕೆ ಹಾಜರಾಗಿ ಪ್ರಕರಣದ ವಸ್ತು ಸ್ಥಿತಿ ಬಗ್ಗೆ ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ನಾವು ಈ ದಾವೆಯನ್ನು ಪ್ರತಿವಾದಿಯರ ಮೇಲೆ ಪಾಲುವಾಟ್ನಿ ಕೇಳಿ ಸಲ್ಲಿಸಿರುತ್ತೇವೆ. ನನ್ನ ಅಜ್ಜ ಗಂಗಪ್ಪ ಶಿವರುದ್ರಪ್ಪ ಬಂಗಿ ಇವರಲ್ಲಿ ಆಸ್ತಿ ಕೇಳಿ ದಾವೆ ದಾಖಲಿಸಿದ್ದೇನೆ. ನನ್ನ ಅಜ್ಜ ಗಂಗಪ್ಪ ಶಿವರುದ್ರಪ್ಪ ಬಂಗಿ ಇವರಿಗೆ ದಾವಾ ಆಸ್ತಿ ಹಿರಿಯರಿಂದಾಗಲಿ (ಮುತ್ತಜ್ಜ ಕಡೆಯಿಂದ) ಅಥವಾ ಹೆಣ್ಣು ಮಕ್ಕಳ ಕಡೆಯಿಂದ ಬಂದಿರುವುದಿಲ್ಲ. ದಾವಾ ಆಸ್ತಿ ನನ್ನ ಅಜ್ಜ ಗಂಗಪ್ಪ ಶಿವರುದ್ರಪ್ಪ ಬಂಗಿ ಇವರಿಗೆ ಅವರ ಗಳಿಕೆಯಿಂದ ಖರೀದಿಸಿದ ಆಸ್ತಿ ಆಗಿರುತ್ತದೆ. ಮಾಳಾಪೂರ ಗ್ರಾಮದ ಒಂದು ಜಮೀನು ಹಾಗೂ ಮುಧೋಳದಲ್ಲಿನ ಎರಡು ಮನೆಗಳ ಮೇಲೆ ಪಾಲುವಾಟ್ನಿ ಕೇಳಿ ದಾವೆ ಹೂಡಿರುತ್ತೇನೆ. ದಾವಾ ಜಮೀನು ಸರ್ವೆ ನಂ.22/1 ಆಗಿರುತ್ತದೆ ಹಾಗೂ ದಾವಾ ಮನೆಯ ಸಿ.ಟಿ.ಎಸ್. ನಂ.1711 ಎ ಮತ್ತು 1712 ಆಗಿರುತ್ತದೆ. ದಾವಾ ಆಸ್ತಿಗಳಲ್ಲಿ ಪ್ರಸ್ತುತ ಪ್ರತಿವಾದಿ ನಂ.3, 5 ಮತ್ತು 6 ಇವರು ಸುಮಾರು 20 ವರ್ಷಗಳಿಂದ ಕಬ್ಜಾ ವಹಿವಾಟಿಯಲ್ಲಿರುತ್ತಾರೆ. ಅದಕ್ಕೆ ಸಂಬಂಧಪಟ್ಟ ಕರ ಮತ್ತು ಕರೆಂಟ್ ಬಿಲ್ಲನ್ನು ಅವರು ಕಟ್ಟುತ್ತಾರೆ ಎಂದರೆ ಸರಿ.

ನನ್ನ ಅಜ್ಜ ಗಂಗಪ್ಪ ಶಿವರುದ್ರಪ್ಪ ಬಂಗಿ ಮತ್ತು ಶಂಕ್ರಪ್ಪ ಬಕುಳಪ್ಪ ಡಂಗಿ ಇವರು ಅಮೃತಗೌಡ ಗೌಡಪ್ಪಗೌಡ ನಾಡಗೌಡರ ಇವರ ಕಡೆಯಿಂದ 17.06.1982 ರಲ್ಲಿ ಖರೀದಿ ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ.

ನಾನು ನನ್ನ ಸಾಕ್ಷ್ಯ ನುಡಿಯುವ ಪೂರ್ವದಲ್ಲಿ ನವಮ್ಮ ವಕೀಲರ ಕಛೇರಿಗೆ ಭೇಟಿ ನೀಡಿ ಪ್ರಕರಣದಲ್ಲಿ ನಾನು ಮತ್ತು ಎದುರುದಾರರು ಪ್ರತಿವಾಯರು ಯಾವೆಲ್ಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆಂದು ಕೇಳಿ ತಿಳಿದುಕೊಂಡಿರುತ್ತೇನೆ.

1982 ರಲ್ಲಿ ಆಗ ಖರೀದಿ ಪತ್ರ ಗಂಗಪ್ಪ ಮತ್ತು ಶಂಕ್ರಪ್ಪ ಇವರ ಸಾಮೂಹಿಕ ಖರೀದಿ ಪತ್ರ ಎಂದರೆ ನನಗೆ ಗೊತ್ತಿಲ್ಲ. 1982 ರಲ್ಲಿ ನನ್ನ ಅಜ್ಜ ಗಂಗಪ್ಪ ಶಿವರುದ್ರಪ್ಪ ಬಂಗಿ ಮತ್ತು ಶಂಕ್ರಪ್ಪ ಬಕುಳಪ್ಪ ಡಂಗಿ ಇವರು ಅಮೃತಗೌಡ ಗೌಡಪ್ಪಗೌಡ ನಾಡಗೌಡರ ಇವರ ಕಡೆಯಿಂದ 17.06.1982 ರಲ್ಲಿ ಖರೀದಿ ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸದರಿ 1982 ರ ಖರೀದಿ ಪತ್ರದ ಪ್ರಕಾರ ಎಂ.ಇ. ನಂ. 1717 ಜಾರಿಗೆ ಬಂತು ಎಂದರೆ ಇರಬಹುದು.

ಅಸಲ ದಾವಾ ಸಂಖ್ಯೆ. 180/2015
ಪಿ. ಡಬ್ಲು- 1

ದಿನಾಂಕಃ 30.07.1990 ರಲ್ಲಿ ಶಂಕ್ರಪ್ಪ ಲಕ್ಕುಳೆಪ್ಪ ಡಂಗಿ ಇವರು 2 ಎಕರೆ ಜಮೀನನ್ನು ಗಂಗಪ್ಪ ಶಿವರುದ್ರಪ್ಪ ಬಂಗಿ ಇವರಿಗೆ ನೊಂದಾಯಿತ ಖರೀದಿ ಪತ್ರದನ್ವಯ ಖರೀದಿ ನೀಡಿದರು ಎಂದರೆ ನನಗೆ ಗೊತ್ತಿಲ್ಲ. ದಾವಾಯಲ್ಲಿ 2 ಖರೀದಿ ಪತ್ರ ಮತ್ತು ಭಕ್ಷಿಸ ಪತ್ರದ ಬಗ್ಗೆ ವೈಯಕ್ತಿಕವಾಗಿ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಅಜ್ಜ ಗಂಗಪ್ಪ ಶಿವರುದ್ರಪ್ಪ ಬಂಗಿ ಮತ್ತು ಶಂಕ್ರಪ್ಪ ಬಕುಳಪ್ಪ ಡಂಗಿ ಇವರದು ಅಳಿಯ ಮಾವನ ಸಂಬಂಧ. ಎರಡನೇ ಖರಿಲದಿ ಪತ್ರ ಅಂದರೆ ಶಂಕ್ರಪ್ಪ ಲ ಡಂಗಿ ಇವರು ಗಂಗಪ್ಪ ಶಿವರುದ್ರಪ್ಪ ಬಂಗಿ ಇವರಿಗೆ 2 ಎಕರೆ ಜಮೀನು ಖರೀದಿ ನೀಡಿದ ಪ್ರಕಾರ ಎಂ.ಇ.ನಂ.1086 ದಾಖಲಾಗಿ ಅವತ್ತಿಂದ ಇಂದಿನವೆಗೂ ಸರ್ಕಾರಿ ದಾಖಲೆಯಲ್ಲಿ ದಾಖಾಗಿದೆ ಎಂದರೆ ಇರಬಹುದು.

30.07.1990 ರಲ್ಲಿ ಆದ ಖರೀದಿ ಪತ್ರಕ್ಕೆ ಸಾಕ್ಷಾದಾರರೆಂದು ಸಹಿ ಮಾಡಿದವರ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ವಾದ ಪತ್ರದಲ್ಲಿ ಪ್ರತಿವಾದಿ ನಂ.6 ಇವರು ದಿನಾಂಕಃ 20.11.2014 ರಂದು ದಾವಾ ಆಸ್ತಿಯಲ್ಲಿ ವಾದಿಯರ ಹೆಸರು ನಮೂದಿಸಲು ಒಪ್ಪಿಗೆ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿ ಮತ್ತು ಅದರ ದಾಖಲೆಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ ಅಲ್ಲ. ದಿನಾಂಕಃ 20.11.2014 ರಂದು ದಾವಾ ಆಸ್ತಿಯಲ್ಲಿ ವಾದಿಯರ ಹೆಸರು ನಮೂದಿಸಲು ಪ್ರತಿವಾದಿ ನಂ.6 ಬರೆದುಕೊಟ್ಟ ಒಪ್ಪಿಗೆ ಪತ್ರ ರದ್ದಾಗಿದೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕಃ 06.08.2015 ರಂದು ನನಗೆ 19 ವರ್ಷ ವಯಸ್ಸು ಇರಬಹುದು. ನನ್ನ ವಾದ ಪತ್ರದಲ್ಲಿನ ಶೆಡ್ಯೂಲ್ ಎ ದಲ್ಲಿನ ವಂಶಾವಳಿ ಮಾಹಿತಿ ನನ್ನ ತಂದೆ ಪ್ರತಿವಾದಿ ನಂ.4 ನೀಡಿರುತ್ತಾರೆ.

ದಾವಾ ಜಮೀನು 3 ಎಕರೆ 22 ಗುಂಟೆ ಇದೆ. ದಾವಾ ಜಮೀನಿನಲ್ಲಿ ಗಂಗಪ್ಪ ಶಿವರುದ್ರಪ್ಪ ಬಂಗಿ, ಪ್ರತಿವಾದಿ ನಂ.3 ಸಿದ್ದಪ್ಪ ಬಂಗಿ ಮತ್ತು ಪ್ರತಿವಾದಿ ನಂ.5 ಕಬ್ಜಾದಲ್ಲಿ ಇರುತ್ತಾರೆ. ದಾವಾ ಜಮೀನು ನನ್ನ ಅಜ್ಜ ಮುತ್ತಜ್ಜರ ಆಸ್ತಿ ಇರುತ್ತದೆ. ಈ ದಾವಾ ಜಮೀನಿಗೆ ಸಂಬಂಧಿಸಿದಂತೆ ಹಳೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೊರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ